ಭಜನೆ, ಕೀರ್ತನೆ ಜೊತೆಗೆ ರುದ್ರವನ್ನು ಹೇಳಿಕೊಡುತ್ತಿದ್ದೆ. ವಾರಕ್ಕೊಮ್ಮೆ ಒಳ್ಳೆಯ ಕತೆ, ಕಾದಂಬರಿ, ಕಾವ್ಯಗಳ ಕುರಿತಾಗಿ ಅವಳೊಂದಿಗೆ ಚರ್ಚಿಸುತ್ತಿದ್ದೆ. ನಾಲ್ಕು ಜನರೊಟ್ಟಿಗೆ ಬೆರೆಯಲು, ಒಳ್ಳೆಯ ಕೃತಿ ಓದಲು ಪ್ರೋತ್ಸಾಹಿಸುತ್ತಿದ್ದೆ. ಸಾಹಿತ್ಯ ಮತ್ತು ಸಂಗೀತಾ ಮನುಷ್ಯನಲ್ಲಿ ಒಳ್ಳೆ ಸಂಸ್ಕಾರ ಬೆಳೆಸುತ್ತದೆ ಅನ್ನೊ ಮಾತು ಸುಳ್ಳಾ ಸ್ವಾಮಿ?'

'ನೋಡಿ ಭಟ್ಟರೆ, ಮನಸ್ಸು ಅನ್ನೋದು ಕುದುರೆ ಇದ್ದ ಹಾಗೆ. ಹರಯದಲ್ಲಿ ಅದರ ಹಾರಾಟ ಜಾಸ್ತಿ. ಕಾಮವೇ ಪ್ರೇಮವೆನ್ನುವ ಭ್ರಮೆಯ ಕಾಲ ಅದು. ಈ ಹಂತದಲ್ಲಿ ಅಪ್ಪ, ಅಮ್ಮ, ಅಣ್ಣ, ತಮ್ಮ, ಬಂಧು–ಬಳಗ ಎಲ್ಲ ಗೌಣ. ಈ ಮನಸ್ಸಿಗೆ ಸೂಕ್ತ ಕಾಲದಲ್ಲಿ ಕಡಿವಾಣ ಹಾಕುವ ಪರಂಪರೆ ನಮ್ಮಲ್ಲಿ ಬಿಟ್ಟು ಹೋದ್ದರಿಂದ ಸಮಸ್ಯೆ ಉದ್ಭವವಾಗ್ತಾ ಇದೆ. ಇದಕ್ಕೆ ಪರಿಹಾರ ಏನೂಂತ ನಾನೂ ಬಹಳ ದಿನಗಳಿಂದ ಯೋಚನೆಮಾಡ್ತಾ ಇದ್ದೇನೆ. ಗಂಡು ಮಕ್ಕಳಿಗೆ ಹೇಗೆ ಉಪನಯನ ಸಂಸ್ಕಾರ ಕೊಡ್ತಾರೋ ಹಾಗೇ ಹೆಣ್ಣು ಮಕ್ಕಳಿಗೂ ಕೊಟ್ಟರೆ ಹೇಗೆ ಅನ್ನೋ ಯೋಚನೆಯು ಶ್ರೀಮಠಕ್ಕೆ ಬಂದಿದೆ. ನೀವು ಮಗಳಿಗೆ ಸಂಸ್ಕಾರ ಕೊಡದೆ ಬೆಳೆಸಿದ್ದೀರಿ ಅಂತ ನಾನು ಹೇಳುವುದಿಲ್ಲ. ನಿಮ್ಮಂಥ ಭಕ್ತರ ಬಗ್ಗೆ ಹಾಗೆ ಹೇಳಿದ್ದಾದರೆ ನನಗೆ ಪಾಪ ಸುತ್ತಿಕೊಂಡೀತು. ದೇವರು ನಿಮ್ಮಂಥ ಭಕ್ತರನ್ನ ಪರೀಕ್ಷಿಸಲು ಇಂಥ ಆಟ ಕಟ್ಟುತ್ತಾನೆ... ಏಳಿ, ಹೀಗೆಲ್ಲ ಹಟ ಮಾಡಬೇಡಿ. ಅದೊಂದು ದುಃಸ್ವಪ್ನ ಅಂತ ಮರೆತುಬಿಡಿ. ನಿಮ್ಮ ಮಗ ಇದ್ದಾನೆ – ಧರ್ಮರಾಯನಂಥವನು – ನಿಮಗೆ ಹೇಗೊ ಹಾಗೆ ಅವನು ಮಠಕ್ಕೂ ಬಹುದೊಡ್ಡ ಆಸ್ತಿ. ನೋಡಿ, ನಿಮ್ಮ ಕುರಿತಾದ ಚಿಂತೆಯಲ್ಲಿ ಅವನೂ ಎಷ್ಟು ನೊಂದಿದ್ದಾನೆ ಅಂತ. ನೀವಾದರೂ ಅಷ್ಟೆ. ನಮ್ಮ ಮಠದ ಅಮೂಲ್ಯ ಭಕ್ತರು. ನಿಜ ಹೇಳಬೇಕೆಂದರೆ ನಮ್ಮ ಪರಂಪರೆಯನ್ನ ಬೆಳಗಿಸೋದು ನಿಮ್ಮಂಥ ದೀಪಗಳೇ. ದೀಪ ಬೆಳಗಿ ಸುತ್ತ ಬೆಳಕು ಚೆಲ್ಲುತ್ತೆ. ಆದರೇನು ಮಾಡೋಣ, ದೀಪದ ಬುಡದಲ್ಲಿ ಕತ್ತಲೆ! ಅಯ್ಯೊ, ನನ್ನ ಬುಡದಲ್ಲಿ ಕತ್ತಲೆ ಇದೇಂತ ದೀಪ ನಂದಿ ಹೋದರೆ ಸುತ್ತ ಬೆಳಕು ಕೊಡೋರು ಯಾರು ಹೇಳಿ?'

ಗಂಟೆಗಟ್ಟಲೆ ಗುರುಗಳ ಉಪದೇಶ ಕೇಳಿ ಬಂದಮೇಲೆ ಮನಸ್ಸೇನೊ ಸ್ವಲ್ಪ ಶಾಂತವಾಗಿತ್ತು. ಎಲ್ಲಾ ಮರೆತು ಮಗ ಸೊಸೆ, ಮಠ, ಸಾಹಿತ್ಯ ಇವೆಲ್ಲ ಆ ನೋವನ್ನ ಮರೆಯುವ ಯತ್ನದಲ್ಲಿ ಒಂದಿಷ್ಟು ಸಹಕಾರಿಗಳಾದರೂ ಆಗಾಗ ಮಗಳ ನೆನಪು ಮರುಕಳಿಸಿ ಯಾಕೆ ಹೀಗಾಯಿತು ಅಂತ ತಮ್ಮಷ್ಟಕ್ಕೇ ವಿಚಾರ ಮಾಡುತ್ತಿದ್ದರು. ತಾನು ಯಾರಿಗೂ ಒಂದು ಮಾತು ಹೇಳಿದವನಲ್ಲ, ಹೀಯಾಳಿಸಿದವನಲ್ಲ, ಆದರೂ ಮುದ್ದಿನ ಮಗಳ ಅಗಲಿಕೆ ಈ ವಯಸ್ಸಿನಲ್ಲಿ ಆದದ್ದೇಕೆ ಎಂದುಕೊಳ್ಳುವಾಗ ಚಂದ್ರಮತಿಯ ನೆನಪಾಗುತ್ತಿತ್ತು. ಆ ಕ್ಷಣದಲ್ಲಿಯೆ ಅವರು ತರಗತಿಯ ಕೊಠಡಿಯೊಳಗೆ ಪ್ರವೇಶ ಪಡೆದುಬಿಡುತ್ತಿದ್ದರು...

'ಇವತ್ತು ಚಂದ್ರಮತಿಯ ಪ್ರಲಾಪ ಎನ್ನುವ ಭಾಗ. ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ ಆಯ್ದುಕೊಂಡದ್ದು... ಗಮನಿಸಿ, ಮಗ ಲೋಹಿತಾಶ್ವ ಹಾವು ಕಚ್ಚಿ ಮಡಿದಾಗ ಆಕೆ ಕೇಳುವ ಪ್ರಶ್ನೆ 'ಎಲ್ಲಿ?' ಎಂದಲ್ಲ; 'ಏಕೆ ಕಚ್ಚಿತ್ತು?' ಎನ್ನುವುದಾಗಿ. ರಾಘವಾಂಕನ ಕವಿತ್ವದ ಘನತೆಯಿರುವುದೆ ಇಲ್ಲಿ...'

ತನ್ನ ಪ್ರಶ್ನೆಯೂ ಈಗದೇ. ಯಾಕೆ ಎನ್ನುವ ಪ್ರಶ್ನೆಗೆ ಗುರುಗಳಿರಲಿ ಸಾಕ್ಷಾತ್ ಬ್ರಹ್ಮನೂ ಉತ್ತರಿಸಲಾರನೇನೋ. ಆದರೆ ಗುರುಗಳು ಹೇಳಿದ್ದು ಒಂದರ್ಥದಲ್ಲಿ ಸರಿ. ಇದು ತನ್ನೊಬ್ಬನ ಸಂಕಟವಲ್ಲ... ಹೀಗೆ ಏನೇನೋ ಸಮಾಧಾನ ತಂದುಕೊಳ್ಳುತ್ತ...

ಸರಿದ ಕಾಲ ಮರೆವಿನ ಹೊದಿಕೆ ಎಳೆಯುತ್ತ ಹೋಯಿತು.

★★★

ಹಳ್ಳಿಮನೆಗಳ ಅಂಗಳದಲ್ಲಿ ಮೂರು ಬಾರಿ ಅಡಿಕೆ ಅಟ್ಟ ಎದ್ದು ಮೂಲೆ ಸೇರಿಯಾಗಿತ್ತು. ಮೊಮ್ಮಗನೊಬ್ಬನನ್ನ ಆಡಿಸಲಾಗುತ್ತಿಲ್ಲ ಎನ್ನುವ ಕೊರಗು ಭಟ್ಟರಿಗೆ ಮತ್ತು ರುಕ್ಮಿಣಿಗೆ ಇದ್ದರೂ